**ಪಾಠ–6** **ಆಗಸ್ಟ್ 4–10**

## ಪೇತ್ರನು ಮಾಡಿದ ಸೇವೆ



<u>**ಸಬ್ಬತ್ತಿನ ಮಧ್ಯಾಹ್ನ :**</u> ಈ ವಾರದ ಪಾಠದ ಅಧ್ಯಯನಕ್ಕಾಗಿ ಅ.ಕೃತ್ಯಗಳು 9:32–43; 10:9–6; ಎಫೆಸ 2:11–19; ಅ.ಕೃತ್ಯ 11:1–26; 12:1–18.

**ಸ್ಮರಣವಾಕ್ಯ : "ಆಗ ಪೇತ್ರನು ಉಪದೇಶ ಮಾಡಲಾರಂಭಿಸಿ ಹೇಳಿದ್ದೇನೆಂದರೆ ದೇವರು ಪಕ್ಷಪಾತಿಯಲ್ಲ, ಯಾವ ಜನರಲಿ ್ಲಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆಂದು ಈಗ ಸಂದೇಹವಿಲ್ಲದೆ ನನಗೆ ತಿಳಿದುಬಂದಿದೆ" (ಅ.ಕೃತ್ಯಗಳು 10:34, 35).**

ಪೌಲನು ತಾರ್ಸಿಗೆ ತೆರಳಿದ ನಂತರ, ಲೂಕನು ಕ್ರೈಸ್ತ ಚರಿತ್ರೆಯ ಮೊದಲ ದಿನಗಳ ವಿವರಣೆಯಲ್ಲಿ ಮತ್ತೆ ಪ್ರಮುಖನಾಗಿ ಕಂಡುಬರುವವನು ಪೇತ್ರನೇ. ಯುದಾಯ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಪೇತ್ರನು ಒಬ್ಬ ಅತಿಥಿ ಬೋಧಕನಾಗಿ ಸಂಚರಿಸಿ ಸೇವೆ ಮಾಡಿದನು. ಅ.ಕೃತ್ಯಗಳಲ್ಲಿ ಅವನ ಕಾಲದ ಎರಡು ಅದ್ಭುತಗಳು ಕಂಡುಬರುತ್ತವೆ. ಐನೇಯನೆಂಬುವನು ಸ್ವಸ್ಥವಾದದ್ದು ಮತ್ತು ತಬಿಥಳ (ದೊರ್ಕ) ಪುನರುತ್ಥಾನ, ಇದಾದನಂತರ ಕೊರ್ನೇಲ್ಯನೆಂಬುವನ ಕತೆ ಅ.ಕೃತ್ಯಗಳು 10 ರಲ್ಲಿ ಇದೆ.

ಅಪೊಸ್ತಲ ಸಭೆಯಲ್ಲಿ ಅಂದು ಬಹಳ ವಾಗ್ವಾದಕ್ಕೆ ಈಡಾದ ವಿಷಯ ಅನ್ಯರು ಕ್ರೈಸ್ತರಾದದ್ದು. ಕೊರ್ನೇಲ್ಯನ ದೀಕ್ಷೆಯ ನಂತರ ನಡೆದ ಚರ್ಚೆಗಳು ಎಲ್ಲ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿಲ್ಲವಾದರೂ, ಪವಿತ್ರಾತ್ಮದ ಸ್ನಾನವಾದದ್ದು, ಪಂಚಾಶತ್ತಮ ದಿನದ ಅನುಭವ ಪುನಃ ಮರುಕಳಿಸಿದ್ದು, ಪೇತ್ರ ಮತ್ತು ಯರೂಸಲೇಮಿನ ಇನ್ನುಳಿದ ಸಭೆಯ ಹಿರಿಯರಿಗೆ ಸುವಾರ್ತೆಯ ಆಶೀರ್ವಾದಗಳು ಬರೀ ಯಹೂದ್ಯರಿಗೆ ಮಾತ್ರವಲ್ಲ ಅನ್ಯರಿಗೂ ಕೂಡ ಲಭ್ಯವಾಗಿವೆ ಎಂಬ ಮನವರಿಕೆ ಮಾಡಿದವು.

ಈ ವಾರದ ಅಭ್ಯಾಸವು ಪುನಃ ಪ್ರಾರಂಭವಾದ ಅಲ್ಪಾವಧಿಯ ಹಿಂಸೆಯನ್ನು ಒಳಗೊಂಡಿದೆ. ಹೆರೋದ ಅರಸನ ಕಾಲದಲ್ಲಿ ನಡೆದದ್ದು. ಇದು ಅಪೊಸ್ತಲರ ಮೇಲೆ ಬೀರಿದ ಪರಿಣಾಮ ಇಲ್ಲಿದೆ; ಮೊದಲು ಪೌಲನು ಸಭೆಯನ್ನು ಹಿಂಸಿಸಿದಾಗ ಅಪೊಸ್ತಲರು ಹಿಂಸೆಯಿಂದ ತಪ್ಪಿಸಿಕೊಂಡಿದ್ದರು.

**ಭಾನುವಾರ** **ಆಗಸ್ಟ್, 5**

### ಲುದ್ದ ಮತ್ತು ಯೊಪ್ಪಗಳಲ್ಲಿ

ಯುದಾಯ ಸೀಮೆಯ ತೀರ ಪ್ರದೇಶದಲ್ಲಿರುವ ಕ್ರೈಸ್ತ ಸಮುದಾಯಗಳಿಗೆ ಪೇತ್ರನು ಭೇಟಿಕೊಟ್ಟನು. ಅವನ ಉದ್ದೇಶ ಅವರನ್ನು ಸತ್ಯದಲ್ಲಿ ಸ್ಥಿರಗೊಳಿಸುವದಾಗಿತ್ತು *(ಅ.ಕೃತ್ಯ 2:42).* ಆದರೆ ದೇವರು ಅವನನ್ನು ಬಹಳ ಶಕ್ತಿಯುತವಾಗಿ ಅದ್ಭುತ (ಪವಾಡ)ಗಳನ್ನು ಮಾಡಲು ಉಪಯೋಗಿಸಿದರು. ಯೇಸು ಸ್ವತಃ ಹೇಗೆ ಪವಾಡಗಳನ್ನು ಮಾಡಿದರೋ ಅದೇ ತರವಾಗಿ.

**ಅ.ಕೃತ್ಯಗಳು 9:32–35 ಓದಿರಿ. ಲೂಕ 5:17–26 ರಲ್ಲಿ ಯೇಸು ಮಾಡಿದ ಅದ್ಭುತ ಕಾರ್ಯಗಳಿಗೂ ಐನೇಯನನ್ನು ಪೇತ್ರನು ಸ್ವಸ್ಥ ಮಾಡಿದ್ದಕ್ಕೂ ಇರುವ ಸಮಾನತೆಗಳು ಯಾವುವು?**

________________________________________________________________

ಈ ಅದ್ಭುತದ ವಿವರ ಅಲ್ಪವಾಗಿದ್ದರೂ, ಅದು ಕರ್ಪೆನೌಮೆಂಬ ಸ್ಥಳದಲ್ಲಿ ಯೇಸು ಮಾಡಿದ ಒಂದು ಚಿರಪರಿಚಯವಿರುವ ಅದ್ಭುತ ಪಾಶ್ವವಾಯು ರೋಗದವನ ಕಥೆಯ ಸ್ಮರಣೆಗೆ ತರುತ್ತದೆ *(ಲೂಕ 5:17–26).* ಹಾಸಿಗೆಯ ವಿವರವೂ ಕೂಡ ಒಂದೇ ಉದ್ದದಲ್ಲಿ ಮಾತ್ರ ಹರಡಲಿಲ್ಲ. ಬಯಲು ತೀರ ಕಾರೋಣವರೆಗೂ ಹರಡಿತು. ನಡೆದ ಘಟನೆ ನಿಜವೆಂದು ತಿಳಿದ ಮೇಲೆ ಬಹಳ ಜನರು

**ಅ.ಕೃತ್ಯ 9:36–43 ಓದಿರಿ. ತಬಿಥಳ ಪುನರುತ್ಥಾನದ ಕಥೆ ಬಗ್ಗೆ ಮತ್ತೊಮ್ಮೆ ಚಿಂತಿಸಿರಿ. ಅವಳಿಗಿರುವದಲ್ಲಿ ವಿಶೇಷತೆ ಏನು?**

________________________________________________________________

ತಬಿಥಾ–ಅರಮಿಕ ಭಾಷೆಯಲ್ಲಿ "ಚಿಂತೆ", ಗ್ರೀಕ್ ಭಾಷೆಯಲ್ಲಿ ದೊರ್ಕೆಗಳು. ಅವಳ ಕ್ರೈಸ್ತೀಯ ಸೇವಾಗುಣಗಳಿಂದ ನೆರೆಹೊರೆಯವರಲ್ಲಿ ಬಹಳ ಪ್ರೀತಿಗಳಿಸಿದ ಹೆಣ್ಣುಮಗಳವಳು. ಅವಳ ಪುನರುತ್ಥಾನ ಮತ್ತು ಯೇಸು ಪುನರುತ್ಥಾನಗೊಳಿಸಿದ ಜೈರಸ್ಸನ ಮಗಳ ಕಥೆಗಳಲ್ಲಿ ಸಮಾನ ಹೋಲಿಕೆ ಇದೆ *(ಲೂಕ 8:41, 42, 49–56).* ಈ ಅದ್ಭುತವನ್ನು ಪೇತ್ರ ಕಣ್ಣಾರೆ ಕಂಡಿದ್ದನು. ಯೇಸುವಿನ ಮಾದರಿಯಲ್ಲಿ ಪೇತ್ರನು ಎಲ್ಲರನ್ನೂ ಕೋಣೆ ಬಿಡುವ ಹಾಗೆ ಹೇಳಿದನು *(ಮಾರ್ಕ 5:40).* ಅದಾದ ಮೇಲೆ ಮೊಣಕಾಲೂರಿ ಪ್ರಾರ್ಥಿಸಿದನು, ನಂತರ ಸತ್ತ ಸ್ತ್ರೀಗೆ, "ತರ್ಬಿಥಾ ಏಳು ಅಂದನು *(ಅ.ಕೃತ್ಯ 9:40).*

ಅಪೋಸ್ತಲರು ಅನೇಕ ಅದ್ಭುತಗಳನ್ನು ಮಾಡಿದರು; ಇವೆಲ್ಲವೂ ದೇವರು ತನ್ನ ಶಿಷ್ಯರ ಮೂಲಕ ಮಾಡಿದ ಮಹಾಕಾರ್ಯಗಳಾಗಿವೆ *(ಅ.ಕೃತ್ಯ 5:12).* ಕಿರ್ಸ್ತನ ಅದ್ಭುತಗಳಿಗೆ ಹೋಲಿಕೆ ಯಾಕೆಂದರೆ, ಸಭೆಗೆ ಇಂದಿನ ಸಭೆ ಹಿಡಿದುಕೊಂಡು ಎಲ್ಲರಿಗೂ ಇದೊಂದು ಸ್ಮರಣೆಯ ಎಚ್ಚರಿಕೆ, ಯಾರಾದರೂ ಅದ್ಭುತ ಮಾಡಬಹುದು. ಆದರೆ ಆ ವ್ಯಕ್ತಿ ತನ್ನನ್ನು ತಾನು ದೇವರಿಗೆ ಎಷ್ಟು ಒಪ್ಪಿಸಿಕೊಟ್ಟಿರುವನು ಅದು ಪ್ರಾಮುಖ್ಯವಾಗಿದೆ *(ಯೋಹಾನ 14:12).* ಯಾವಾಗ ನಾವು ನಮ್ಮನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸುತ್ತೇವೋ ಆಗ ಮಹಾಕಾರ್ಯಗಳು ನೆರವೇರುತ್ತವೆ. ಪೇತ್ರನು ಸತ್ತ ತಬಿಥಳನ್ನು ಎಬ್ಬಿಸಿದಲ್ಲದೇ, ಈ ಅದ್ಭುತ ಯೂಪದಲ್ಲಿರುವ ಅನೇಕರು ಕ್ರೈಸ್ತರಾಗಲು ಕಾರಣವಾಯಿತು *(ಅ.ಕೃತ್ಯ 9:42).*

**ಕೆಲವರು ಇಲ್ಲಿ ನಡೆದ ಅದ್ಭುತದಂತೆ, ಕಾರ್ಯಗಳು ನಡೆದರೆ ಅವರು ದೇವರನ್ನು ನಂಬುತ್ತೇವೆ ಎನ್ನುತ್ತಾರೆ. ಸತ್ಯವೇದದಲ್ಲಿ ನಾವು ಕಾಣುವಂತೆ, ಅದ್ಭುತಗಳು ನಡೆದಾಗ ಜನರು ದೇವರನ್ನು ನಂಬಿದರು, ಇನ್ನು ಕೆಲವು ಕಡೆ ಅದ್ಭುತಗಳು ನಡೆದರೂ ಕೂಡ ಜನರು ದೇವರನ್ನು ನಂಬಲಿಲ್ಲ. ಹಾಗಾದರೆ ಯಾವ ಆಧಾರದ ಮೇಲೆ ನಮ್ಮ ನಂಬಿಕೆ ಇರಬೇಕು?**

**ಸೋಮವಾರ** **ಆಗಸ್ಟ್, 6**

## ಕೊರ್ನೇಲಿಯನ ಮನೆಯಲ್ಲಿ

ಯೊಪ್ಪದಲ್ಲಿ ಚರ್ಮಕಾರನಾದ ಸಿಮೋನನ ಮನೆಯಲ್ಲಿ ಪೇತ್ರನು ತಂಗಿದ್ದನು *(ಅ.ಕೃತ್ಯ 9:43).* ಅದೇ ಸಮಯ ಅಲಿ ್ಲಂದ 40 ಕಿ.ಮೀ. ದೂರದ ಕ್ರೈಸಲೈಯದಲ್ಲಿ ರೋಮನ್ ಶತಾಧಿಪತಿ, ಕೊರ್ನೇಲಿಯನ್ನು ವಾಸಿಸುತ್ತಿದ್ದನು. ಅವನೂ ಮತ್ತು ಮನೆಯವರೂ ಭಕ್ತಿವಂತರು, ಇನ್ನೂ ಅಧಿಕವಾಗಿ ಯೆಹೂದ್ಯನಾಗಿರಲಿಲ್ಲ, ಆತನೊಬ್ಬ ಅನ್ಯನು. ದೇವರು ಅವನಿಗೆ ದರ್ಶನಕೊಟ್ಟು, ಅವನು ಯೋಪ್ಪಕ್ಕೆ, ಸೇವಕರನ್ನು ಕಳುಹಿಸಿ ಪೇತ್ರನನ್ನು ಆಹ್ವಾನಿಸುವಂತೆ ಆದೇಶಿಸಿದನು *(ಅ.ಕೃತ್ಯ10:1–8).*

**ಅ.ಕೃತ್ಯ 10:9–16, 28, 34, 35 ಓದಿರಿ. ಪೇತ್ರನಿಗಾದ ಅನುಭವವೇನು? ಅವನು ಅದನ್ನು ಹೇಗೆ ಅರ್ಥಮಾಡಿಕೊಂಡನು?**

________________________________________________________________

________________________________________________________________

ಪೇತ್ರನು ಕಂಡ ಈ ದರ್ಶನ ಆಹಾರದ ಬಗ್ಗೆ ಅಲ್ಲಿ ಬದಲಾಗಿ ಜನರ ಬಗ್ಗೆ ಎಮ್ದು ಅರ್ಥಮಾಡಿಕೊಳ್ಳುವದು ಬಹಳ ಪ್ರಾಮುಖ್ಯ ಹೌದು, ಅದು ಸುಮಾರು ಮಧ್ಯಾಹ್ನದ ಸಮಯ, ಪೇತ್ರನು ಹಸಿಸಿದ್ದನು, ಒಂದು ಸ್ವರ ಅವುಗಳನ್ನು ಕೊಂದು ತಿನ್ನು ಎಂದಿತು. ದೇವರ ಉದ್ದೇಶ, ಇಲ್ಲಿ ಶುದ್ಧ ಮತ್ತು ಅಶುದ್ಧ ಪ್ರಾಣಿಗಳ ನಡುವೆ ಅಂತರವನ್ನು ತೆಗೆದುಹಾಕಿರೆಂದು

ಹೇಳುವದಲ್ಲ, ಆದರೆ ಪೇತ್ರನು ಸುವಾರ್ತೆ ಸಾರುವಾಗ ಯೆಹೂದ್ಯರು ಮತ್ತು ಅನ್ಯರು ಎಂಬ ಭೇದವನ್ನು ತೆಗೆದುಹಾಕಿ ಎಲ್ಲರಿಗೂ ಸುವಾರ್ತೆ ಸಾರಬೇಕು. ಸುವಾರ್ತೆ ಎಲ್ಲರಿಗೂ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು.

ಪೇತ್ರನಿಗೆ ಈ ದರ್ಶನವಾದದ್ದು ಅವನಲ್ಲಿದ್ದ ಅನ್ಯರಿಗೆ ಸುವಾರ್ತಾ ಸಾರಬಾರದೆಂಬ ಮನೋಭಾವವನ್ನು ಮುರಿಯುವುದಕ್ಕಾಗಿ. ಪೇತ್ರನಿಗೆ ಅನಿಸಿದ್ದು, ತಾನು ಕೊರ್ನೇಲಿಯನ ಮನೆಹೊಕ್ಕರೆ, ಅವನೊಡನೆ ಬೆರೆತರೆ, ತಾನು ಹೋಲಿ ಕೆಯಾಗುವೆನು, ಹಾಗಾದರೆ ದೇವಾಲಯದೊಳಗೆ ಹೋಗಿ ಆರಾಧನೆ ಮಾಡಲಾಗದು ಅಥವಾ ದೇವರ ಸನ್ನಿಧಿ ಸೇರಲಾಗದು. ಒಂದನೆ ಶತಮಾನದ ಮೆಹೂದ್ಯರು, ಸುನ್ನತಿಯಾಗದ ಅನ್ಯರೊಡನೆ ಯಾವ ಹೊಕ್ಕುಬಳಕೆ ಇಟ್ಟುಕೊಂಡಿರಲಿಲ್ಲ.

ಈ ಸಮಸ್ಯೆ ಉದ್ಭವಿಸಿದ್ದು ಅಂದಿನ ಧರ್ಮಶಾಸ್ತ್ರದಿಂದಾಗಿ, ಅದು ಇತರರನ್ನು ಇಸ್ರಾಯೇಲ್ಯರೊಡನೆ ಸಮಾನರೆಂದು ಕಾಣಲಿಲ್ಲ. ಮೂಲತಃ ಇಸ್ರಾಯೇಲ್ಯರು ಜಗತ್ತಿಗೆ ದೇವರ ಸಾಕ್ಷಿಯಾಗಿರುವದಕ್ಕಾಗಿ ಕರೆಯಲ್ಪಟ್ಟವರು ಆದರೆ ಅದು ಈಗ ದುರಳ ರೂಪ ತಾಳಿ ಜನರನ್ನು ದೂರ ಇಟ್ಟಿತ್ತು.

ಸುನ್ನತಿ ದೇವರು ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಯ ಸುಚಕವಾದ್ದರಿಂದ ಸುನ್ನತಿಯಾಗದ ಇತರರನ್ನು ಅವರು ಬೇರ್ಪಡಿಸಿ ಅವರನ್ನು ಒಂದು ತರದ ದ್ವೇಷದಿಂದಲೇ ಒಡಂಬಡಿಕೆಗೆ ಬದ್ಧರಾದವರೊಡನೆ ಇವರಿಗೆ ಯಾವ ಆಶೀರ್ವಾದಗಳೂ ಇರಲಿಲ್ಲ. ಅವರು ಆಶೀರ್ವಾದಕ್ಕಾಗಿ ಸುನ್ನತಿ ಮಾಡಿಸಿಕೊಂಡು ಯೆಹೂದ್ಯರಾಗಬೇಕಿತ್ತು. ಯೇಸುವಿನ ಮರಣ ಎಲ್ಲರಿಗಾಗಿ ಎಂಬ ಅವರ ತಿಳುವಳಿಕೆಗೆ ಮೇಲಿನ ಅಂಶ ಸರಿಹೋಗದಿದ್ದರೂ ಕ್ರಮೇಣವಾಗಿ ಅವರು ಅದನ್ನು ಸರಿಯಾಗಿ ಅರ್ಥಮಾಡಿಕೊಂಡರು.

**ತೀತ 2:11; ಗಲಾ 3:26–38, ಮತ್ತು ಎಫೆಸ 2:11–19 ಓದಿರಿ. ಸುವಾರ್ತೆ ಸಾರ್ವತ್ರಿಕವೆಂಬುದರ ಬಗ್ಗೆ ಈ ವಾಕ್ಯಗಳು ತಿಳಿಸುವುದೇನು? ಜನಾಂಗ, ಕುಲಗಳ ಆಧಾರದ ಮೇಲೆ ಅವರ ಬಗ್ಗೆ ಮುನ್ನ ಕಲ್ಪಣೆಗಳನ್ನು ಮಾಡಿಕೊಂಡಿರುವದು ಮಹಾತಪ್ಪೆಂದು ಈ ವಾಕ್ಯಗಳು ಹೇಗೆ ಹೇಳುತ್ತವೆ?**

**ಮಂಗಳವಾರ** **ಆಗಸ್ಟ್, 7**

## ಆತ್ಮನ ವರ

ಅ.ಕೃತ್ಯ 10:44–48, ಪ್ರಾರಂಭದ ಕ್ರೈಸ್ತ ಇತಿಹಾಸದಲ್ಲಿ ನಡೆದ ಒಂದು ಸೂಕ್ಷ್ಮ ಘಟನೆಯನ್ನು ತಿಳಿಸುತ್ತದೆ. ಅಪೋಸ್ತಲರಲ್ಲಿ ಒಬ್ಬನು ಅದೇ ಮೊದಲ ಸಾರಿ ಸುನ್ನತಿಯಾಗದೆ ಅನ್ಯರಿಗೆ ಸುವಾರ್ತೆ ಸಾರಿದನು. ಗ್ರೇಕ್ ಸಂಪ್ರದಾಯದ ವಿಶ್ವಾಸಿಗಳಿಗೆ ವ್ಯತ್ಯಾಸವಾಗಿ ಅಪೋಸ್ತಲರು ಮತ್ತು ಯುದಾಯದ ಇತರ ವಿಶ್ವಾಸಿಗಳು ಅನ್ಯರನ್ನು ತಮ್ಮ ಸಭೆಯೊಳಗೆ ಸೇರಿಸಿಕೊಳ್ಳಲು ತಯಾರಿರಲಿಲ್ಲ. ಯೇಸು ಇಸ್ರಾಯೇಲ್ಯರ ಮೆಸ್ಸಿಯನಾದ್ದರಿಂದ ಆತನ ಸುವಾರ್ತೆ ಬರೀ ಯೆಹೂದ್ಯರಿಗೆ ಮಾತ್ರ ಸಾರಲ್ಪಡಬೇಕು ಎಂದು ಅವರು ನಂಬಿದ್ದರು. ಅನ್ಯರು ಮೊದಲು ಯೆಹೂದ್ಯರಾಗಿ ಪರಿವರ್ತನೆಗೊಂಡು ನಂತರ ಕ್ರಿಸ್ತ ವಿಶ್ವಾಸಿಗಳ ಗುಂಪಿಗೆ ಸೇರಬಹುದಾಗಿತ್ತು. ಯೆಹೂದ್ಯರಲ್ಲಿರುವ ಈ ನಿಲುವನ್ನೇ ಬದಲಾಯಿಸಬೇಕಾಗಿತ್ತು.

ಕೊರ್ನೇಲಿಯನಿಗೂ ಅವನ ಮನೆಯವರಿಗೂ ನಾನಾ ಭಾಷೆಗಳನ್ನಾಡುವ ಪವಿತ್ರಾತ್ಮನ ವರ ಪ್ರಾಪ್ತವಾದದ್ದನ್ನು ಎಲ್ಲರ ಕಣ್ಣುಗಳು ಕಂಡವು. ಇದು ದೇವರಿಗೆ ಯಾವ ತಾರತಮ್ಯವಿಲ್ಲ ಯೆಹೂದ್ಯರು ಮತ್ತು ಗ್ರೀಕರು ರಕ್ಷಣೆಯ ವಿಷಯದಲ್ಲಿ ದೇವರ ಮುಂದೆ ಒಂದೇ ಎಂಬುದು ಅವರೆಗೆ ಮೊಲಿದ್ದ ಇದ್ದ ತಪ್ಪು ಕಲ್ಪನೆಯನ್ನು ತಳ್ಳಿಹಾಕಿತ್ತು.

**ಅ.ಕೃತ್ಯ. 11:1–18 ಓದಿರಿ. ಕ್ರೈಸರೈಯಲ್ಲಿನ ಪೇತ್ರನ ಅನುಭವಕ್ಕೆ ಸಭೆ ಯಾವ ಪ್ರತಿಕ್ರಿಯೆ ತೋರಿಸಿತು?**

________________________________________________________________________________

________________________________________________________________________________

ದೀರ್ಘಕಾಲದಿಂದ ಅನ್ಯರ ಬಗೆಗಿನ ಯೆಹೂದ್ಯರಲ್ಲಿದ್ದ ಮುನ್‌ಕಲ್ಪನೆ ಯರೂಸಲೇಮಿನ ವಿಶ್ವಾಸಿಗಳು ಅನ್ಯರ ಮನೆಯಲ್ಲಿ ಪೇತ್ರ ಊಟ ಮಾಡಿದನೆಂದು ಅವನನ್ನು ಬಂಡಿಸುವಂತೆ ಮಾಡಿತು. ಅವರೆಲ್ಲರಿಗೆ ಕೊರ್ನೇಲಿಯನ ಮತ್ತು ಮನೆಯವರ

ರಕ್ಷಣೆಗಿಂತ ಯೆಹೂದ್ಯರ ಆಚಾರ ವಿಚಾರಗಳು ಹೆಚ್ಚಿನವಾದವು ಎಂದು ಕಂಡುಬರುತ್ತದೆ. ಸಭೆ ಅನ್ಯರನ್ನು ಸಭೆಯೊಳಗೆ ತೆಗೆದುಕೊಂಡರೆ ಇಸ್ರಾಯೇಲ್ಯರ ವಿಶ್ವಾಸಕ್ಕೆ ದ್ರೋಹ ಬಗೆದಂತಾಗಬಹುದು ಎಂದು ಭಯಪಟ್ಟರು. ಇದರಿಂದ ದೇವರ ಮೆಚ್ಚುಗೆಯನ್ನು ಕಳೆದುಕೊಳ್ಳಬಹುದು, ಸ್ತೆಫನನ್ನು ದೂರಿ, ಕೊಂದ ಯೆಹೂದ್ಯರು ತಮ್ಮನ್ನು ವಿರೋಧಿಸಬಹುದು ಎಂದುಕೊಂಡರು.

"ಕ್ರಿಸ್ತನ ಸಭೆ ಸೇವೆಯ ಒಂದು ನೂತನ ಅಧ್ಯಾಯವನ್ನೇ ಪ್ರಾರಂಭ ಮಾಡುವ ಸಮಯ ಬಂದಿತು. ಅನೇಕ ಯೆಹೂದ್ಯ ವಿಶ್ವಾಸಿಗಳು ಅನ್ಯರಿಗೆ ಮುಚ್ಚಿದ ಬಾಗಿಲು ಈಗ ತೆರೆಯಿತು. ಸುವಾರ್ತೆ ಸ್ವೀಕರಿಸಿದ ಅನ್ಯರು ಈಗ ಸುನ್ನತಿಯ ಸಂಸ್ಕಾರಕ್ಕೊಳಗಾಗದೆ ಯೆಹೂದ್ಯರೊಂದಿಗೆ ರಕ್ಷಣೆ ಪಡೆಯುವದರಲ್ಲಿ ಸಮಪಾಲು ಹೊಂದುವವರಾದರು" – ಎಲೆನ್ ಜಿ ವೈಟ್, ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್ ಪುಟ 136.

ಪಂಚಾಶತ್ತಮ ದಿನದಂದು ಅವರು ನಾನಾ ಭಾಷೆಗಳನ್ನಾಡುವ ವರ ಹೊಂದಿದ್ದರೋ ಹಾಗೆಯೇ ಈಗಲೂ ನಾನಾ ಭಾಷೆ ಮಾತನಾಡುವವರಾದರು, ಪರಲೋಕದ ಯಾರಿಗೂ ತಿಳಿಯದ ಭಾಷೆಗಳನ್ನಲ್ಲ. ಉದ್ದೇಶ ಮಾತ್ರ ಬೇರೆಯಾಗಿತ್ತು. ಅಪೋಸ್ತಲರು ಅಂದು ಜಗತ್ತಿಗೆಲ್ಲ ಸುವಾರ್ತೆ ಸಾರುವುದಕ್ಕಾಗಿ ನಾನಾ ಭಾಷೆಗಳನ್ನಾಡಿದರೆ, ಇಲ್ಲಿ ಕೊರ್ನೇಲಿಯನು ನಾನಾ ಭಾಷೆಗಳನ್ನಾಡುವ ಮೂಲಕ ಅನ್ಯರಿಗೂ ಪವಿತ್ರಾತ್ಮನು ಒಲಿಯುತ್ತಾನೆ ಎಂಬುದನ್ನು ಸಾಬೀತು ಪಡಿಸುವ ದೇವರ ಕೃಪೆಯ ಕಾರ್ಯವಾಗಿತ್ತು.

**ಬುಧವಾರ** **ಆಗಸ್ಟ್, 8**

## ಅಂತಿಯೋಕ್ಯದಲ್ಲಿಯ ಸಭೆ

ಕ್ರೊನೇಲಿಯನು ಪರಿವರ್ತನೆಯಿಂದ ಪ್ರೇರಿತನಾದ ಲೂಕನು ಪೇತ್ರನ ಸೇವಾ ವರದಿಯನ್ನು ನಿಲ್ಲಿಸಿ ಅನ್ಯರಿಗೆ ಸುವಾರ್ತೆ ಸಾರೋಣ ಪ್ರಗತಿ ಪಥದಲ್ಲಿರುವದನ್ನು ತೋರಿಸಿದನು.

**ಅ.ಕೃತ್ಯ 11:19–26 ಓದಿರಿ. ಯೆರೂಸಲೇಮಿನಿಂದ ಕೆಲವು ನಿರಾಶ್ರಿತರು ಆಂಕಿಯೋಕ್ಯಕ್ಕೆ ಬಂದಾಗ ಏನಾಯಿತು?**

____________________________________________________________

____________________________________________________________

ಅ.ಕೃತ್ಯದ 11 ಈ ಭಾಗ 8 ಅಧ್ಯಾಯದಲ್ಲಿಯ ಪೌಲನ ಹಿಂಸೆಯ ಕಾರ್ಯಕ್ಕೆ ಸಂಬಂಧಿಸಿದೆ. ಹೀಗೆ, ಈ ಮೊದಲು ತಿಳಿಸಿದ ಘಟನೆಗಳನ್ನು ಯುದಾಯ ಹಾಗೂ ಇತರ ಸ್ಥಳಗಳಲ್ಲಿ ನಡೆಯುತ್ತಿರುವಾಗ ಕೆಲವು ಗ್ರೀಕ್ ವಿಶ್ವಾಸಿಗಳಿಗೆ ಯ–ೆರೂಸಲೇಮಿನಿಂದ ಹೊರಹೋಗಲು ಒತ್ತಾಯ ಬಂದದ್ದರಿಂದ ಅವರು ನಾನಾ ಕಡೆಗಳಿಗೆ ಚದುರಿಹೋಗಿ, ಹೋದ ಕಡೆಗಳಲ್ಲಿ ಸುವಾರ್ತೆ ಸಾರಿದರು.

ಲೂಕನು ಸಿರಿಯದೇಶದ ಅಂತಿಯೋಕ್ಯ ಪಟ್ಟಣಕ್ಕೆ ವಿಶೇಷ ಗಮನ ಕೊಟ್ಟಿದ್ದಾನೆ. ಇಲ್ಲಿಗೆ ಆಗಮಿಸಿದ ನಿರಾಶ್ರಿತರು ಅಲಿ ್ಲಯ ತಮ್ಮ ಯೆಹೂದ್ಯರಿಗೆ ಮತ್ತು ಗ್ರೀಕ್ ಮೂಲದ ಜನರಿಗೆ ಸುವಾರ್ತೆ ಸಾರಿದರು. ಅವರು ದೇವರನ್ನು ನಂಬಿದರು. ಅ.ಕೃತ್ಯ 1:8 ರಲ್ಲಿ ಯೇಸು ನೇಮಿಸಿದ ಸೇವಾ ಕಾರ್ಯ ಈ ಗ್ರೀಕ್ ಮೂಲಕ ಯೆಹೂದ್ಯ ವಿಶ್ವಾಸಿಗಳ ಬದುಕಿನಲ್ಲಿ ಈಡೇರಿತು. ಅನ್ಯರಿಗೆ ಸುವಾರ್ತೆ ಮೊದಲು ಹೊತ್ತು ಒಯ್ದವರು ಇವರೇ.

ಅಂತಿಯೋಕ್ಯದಲ್ಲಿಯ ಸಭೆಯ ಯಶಸ್ಸು ತಿಳಿದ ಯೆರೂಸಲೇಮಿನಲ್ಲಿದ್ದ ಅಪೋಸ್ತಲರು ಬರ್ನಾಬನನ್ನು ಅಲ್ಲಿಯ ಪರಿಸ್ಥಿತಿಗಳನ್ನು ಅರಿತುಕೊಳ್ಳಲು ಕಳುಹಿಸಿದರು. ಸುವಾರ್ತಾ ಸೇವೆಯ ಬೆಳವಣಿಗೆಯ ಸಾಧ್ಯತೆಯನ್ನು ಮನಗಂಡ ಬರ್ನಾಬನು ತಾರ್ಸದಲ್ಲಿಯ ಪೌಲನ ಸೇವೆಗೆ ಸಮರ್ಥ ಸಹಾಯಕ– ನಾಗುತ್ತಾನೆಂದು ಕರೆ ಕಳುಹಿಸಿದರು.

ಬರ್ನಾಬನು ಸರಿಯಾದದ್ದನ್ನೇ ಮಾಡಿದನು. ಈ ವರ್ಷ ಇಬ್ಬರೂ ಕೂಡಿ ಸೇವೆ ಮಾಡಿದರು. ಅನ್ಯಜನರ ದೊಡ್ಡ ದೊಡ್ಡ ಗುಂಪುಗಳು ಸುವಾರ್ತೆ ಕೇಳಿಸಿಕೊಂಡು ಎಂಥಾ ಹುರುಪಿನಿಂದ ಇವರು ಯೇಸುಸ್ವಾಮಿಯ ಬಗ್ಗೆ ಸಾಕ್ಷಿ ಹೇಳಿದರೆಂದರೆ ಅಲ್ಲಿಯ ವಿಶ್ವಾಸಿಗಳಿಗೆ (ಶಿಷ್ಯರಿಗೆ) ಮೊದಲ ಬಾರಿಗೆ "ಕ್ರೈಸ್ತ ಎಂಬ ಹೆಸರು ಬಂತು *(ಅ.ಕೃತ್ಯಗಳು 11:26).* ಶಿಷ್ಯರಿಗೆ ಕ್ರೈಸ್ತರೆಂಬ "ಹೆಸರು ಬಂತು" ಎನ್ನುವಾಗ ಹೊರಗಿನವರೇ ಆ ಗುಂಪಿಗೆ ಹೆಸರಿಟ್ಟರು ಎಂಬ ಅರ್ಥಕೊಡುತ್ತದೆ. ಅದು ಒಂದು ಹಿಯಾಳಿಕೆಯೋ ಆಗಿರಬಹುದು. ಯಾಕೆಂದರೆ ವಿಶ್ವಾಸಿಗಳು ತಮ್ಮನ್ನೇ ತಾವು "ಸಹೋದರರು" "ಶಿಷ್ಯರು"

ಅಥವಾ "ದೇವಜನರು" *(ಅ.ಕೃತ್ಯಗಳು 9:13)* ಎಂದು ಕರೆಯಿಸಿಕೊಳ್ಳಲು ಇಷ್ಟಪಟ್ಟರು. ಅಪೋಸ್ತಲರ ಕೃತ್ಯಗಳು ಪುಸ್ತಕ ಬರವಣಿಗೆ ಮುಗಿಯುವದರೊಳಗೆ 'ಕ್ರೈಸ್ತರು' ಎಂಬ ಪದ ಸಾಮಾನ್ಯ ಹೆಸರಾಗಿತ್ತು *(ಅ.ಕೃತ್ಯಗಳು 26:28).* ಇದನ್ನು ಲೂಕನು ಒಪ್ಪಿಕೊಂಡಂತೆ ಕಾಣುತ್ತದೆ. "ಕ್ರೈಸ್ತರು" ಎಂದರೆ ಕ್ರಿಸ್ತನ ಹಿಂಬಾಲಕರು ಅಥವಾ ಹೊಂದಿಕೊಂಡವರು.

**"ಕ್ರೈಸ್ತನು/ಳು" ಎಂದು ಕರೆಯಿಸಿಕೊಳ್ಳುವುದರ ಬಗ್ಗೆ ನಿಮಗೇನು ಅನ್ನಿಸುತ್ತದೆ? ನಿಮ್ಮ ಬದುಕು ನಿಜವಾಗಿಯೂ ಕ್ರೈಸ್ತ ಬದುಕೇ? ಬದುಕಿನ ನೈಜ ವಿಷಯಗಳಿಗೆ ಬಂದಾಗ ಅನ್ಯರಿಗಿಂತ ನೀವು ಯಾವ ವಿಷಯಗಳಲ್ಲಿ ವ್ಯತ್ಯಾಸವಾಗಿರುತ್ತೀರಿ?**

**ಗುರುವಾರ** **ಆಗಸ್ಟ್, 9**

## ಹೆರೋದನ ಹಿಂಸೆ

ಯುದಾಯ ಪ್ರಾಂತ್ಯಕ್ಕೆ ಗಮನ ಹರಿಸೋಣ, ಅಲ್ಲಿ ಹೆರೋದನು ಯಾಕೋಬನನ್ನು ಹತ್ಯೆ ಮಾಡಿದ್ದಾನೆ. ಯಾಕೋಬನು ಯೋಹಾನನ ತಮ್ಮನು ಜೆಬೆದಾಯನ ಮಗನು *(ಮಾರ್ಕನು 1:19).* ಅವನು ಪೇತ್ರನಿಗೂ ಅದನ್ನೇ ಮಾಡಬೇಕೆಂದಿದ್ದನು. ಅ.ಕೃತ್ಯ 12:1–4 ಓದಿರಿ. ಪ್ರಾರಂಭದ ಸಭೆ ಎದುರಿಸಿದ ಸವಾಲುಗಳ ಬಗ್ಗೆ ಇವು ನಮಗೆ ಕಲಿಸುವುದೇನು?

ಅರಸನಾದ ಹೆರೋದನು ಅನ್ನವಾಗಿ ಅವನು ಅಗ್ರಿಪ್ಪಾ ಮೊದಲನೆಯವನು, ಶ್ರೇಷ್ಠ ಹೆರೋದನ ಮೊಮ್ಮಗನು *(ಮತ್ತಾಯ 2:1).* ಇವನು ಯದಾಯ ಪ್ರಾಂತ್ಯವನ್ನು ಆಳಿದ್ದು ಕ್ರಿ.ಶ. 40 ರಿಂದ 44. ಇವನು ಭಕ್ತಿವಂತನಾಗಿ ತೋರಿದ್ದರಿಂದ ಯೆಹೂದ್ಯ ಜನಾಂಗಗಳಲ್ಲಿ ಜನಪ್ರಿಯವಾಗಿದ್ದನು. ಅದರಲ್ಲೂ ಫರಿಸಾಯರೊಳಗೆ ಅಪೋಸ್ತಲರಿಗೆ ಹಿಂಸೆ ಕೊಡುವದರ ಮೂಲಕ ಯೆಹೂದ್ಯರ ಮೆಚ್ಚುಗೆ ಪಡೆಯಲು ಇವನು ಪ್ರಯತ್ನಿಸಿದ ಎಂಬದನ್ನು ಇತರ ಮೂಲಗಳ ಖಚಿತ ಪಡಿಸುತ್ತೇವೆ.

ಯಾರೋಬನ ಹತ್ಯೆ ಫಲಿಸಿತು, ತನ್ನ ಉದ್ದೇಶಗಳು ಈಡೇರಿದವು ಎಂದು ಅಗ್ರಿಪ್ಪನು ಪೇತ್ರನನ್ನೂ ಹತ್ಯೆ ಮಾಡುವ ಹುನ್ನಾರು ಹಾಕಿದನು. ಪೇತ್ರನನ್ನು ಬಂಧಿಸಿ ಕಾವಲಿಟ್ಟರು. ನಾಲ್ಕುಜನ ಕಾವಲುಗಾರರು ಒಂದ ತಂಡದಲ್ಲಿದ್ದು, ಆ ತರಹ ನಾಲ್ಕು ತಂಡಗಳು ಅವನನ್ನು ಕಾಯುತ್ತಿದ್ದವು. ರಾತ್ರಿಯ ನಾಲ್ಕು ಅವಧಿಗಳಲ್ಲಿ ಪೇತ್ರನ ಬಳಿ ಯಾವಾಗಲೂ ನಾಲ್ವರು ಸನಿಕರಿರುತ್ತಿದ್ದರು. ಇಬ್ಬರು ಸೈನಿಕರಿಗೆ ಅವನನ್ನು ಸರಪಳಿ ಮೂಲಕ ಎರಡು ಪಾಶ್ವಗಳಲ್ಲಿ ಕಟ್ಟಿಹಾಕುತ್ತಿದ್ದರು. ಇಬ್ಬರು ಸೈನಿಕರು ಪ್ರವೇಶ ದ್ವಾರದಲ್ಲಿದ್ದು ಕಾಯುತ್ತಿದ್ದರು. ಈ ಅತಿ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾಗಿತ್ತು. ಯಾಕೆಂದರೆ ಈ ಹಿಂದೆ ಪೇತ್ರಯೋನಾರನ್ನು ಬಂಧಿಸಿದಾಗ ಆದ ಅನುಭವ ಪುನಃ ಮರುಕಳಿಸಬಾರದೆಂದು *(ಅ.ಕೃತ್ಯ 5:17–20).*

**ಅ.ಕೃತ್ಯ 12:5–18 ಓದಿರಿ. ಸಹೋದರರ ಪ್ರಾರ್ಥನೆಯ ಫಲವಾಗಿ ನಡೆದದ್ದೇನು?**

______________________________________________________________________

______________________________________________________________________

ಅಗ್ರಿಪ್ಪ ಅರಸನು ಪೇತ್ರನಿಗೆ ನ್ಯಾಯತೀರ್ಪು ಮಾಡಿ ಅವನನ್ನು ಹತ್ಯೆ ಮಾಡಬೇಕು ಎಂದು ಹಿಂದಿನ ರಾತ್ರಿ ದೇವದೂತರು ಪೇತ್ರನ ಬಳಿಗೆ ಒಂದು ಅದ್ಭುತವಾಗಿ ಅವನನ್ನು ಬಿಡುಗಡೆ ಮಾಡಿದರು. ಅದಾದಮೇಲೆ ಕ್ರೈಸ್ತರೈದಲ್ಲಿ ಅಗ್ರಿಪ್ಪನ ಸಾವಾದ ಕಥೆಯನ್ನು ನಾವು ಓದುತ್ತೇವೆ *(ಅ.ಕೃತ್ಯ 12:20–23).* ಆತನ ಸಾವಿಗೆ ಕಾರಣಗಳನ್ನು ಕಂಡು ಹಿಡಿಯುವ ಪ್ರಯತ್ನಗಳಾಗಿವೆ (ಕರಳುಬೇನೆ, ಗಡೆಹುಣ್ಣು, ವಿಷ) ಹೀಗಿದ್ದರೂ ಲೂಕನು ಮಾತ್ರ ಅರಸನು ಸಾವು ದೇವರು ತೀರ್ಪು ಎಂದು ಬರೆಯುತ್ತಾನೆ.

**ಯಾಕೋಬನು ಕೊಲ್ಲಲ್ಪಟ್ಟನು, ಪೇತ್ರನು ಬಿಡುಗಡೆಯಾದನು ಮತ್ತು ಹೆರೋದನು ದೇವರ ಶಿಕ್ಷೆಗೆ ಗುರಿಯಾದವನು. ಕೆಲವು ಸಂದರ್ಭಗಳಲ್ಲಿ ನ್ಯಾಯವಿದೆ; ಇನ್ನು ಕೆಲವು ಸಂದರ್ಭಗಳಲ್ಲಿ ಹಾಗೆ ಅನಿಸುವುದಿಲ್ಲ. ನಮ್ಮ ಎಲ್ಲ ಪ್ರಶ್ನೆಗಳಿಗೆ ಒಪ್ಪುವ ಉತ್ತರಗಳು ಸಿಕ್ಕುವುದಿಲ್ಲವೆಂಬುದರ ಬಗ್ಗೆ ಮತ್ತು ನಮಗೆ ಗೋಚರವಾಗದವುಗಳ ಬಗ್ಗೆ ನಾವು ಯಾರೆ ನಂಬಿಕೆಯಿಂದಲೇ ಜೀವಿಸಬೇಕು ಎಂಬ ವಿಚಾರವಾಗಿ ನಾವು ಇಲ್ಲಿ ಏನೇನು ಕಲಿಯುತ್ತೇವೆ?**

**ಹೆಚ್ಚಿನ ಅಧ್ಯಯನಕ್ಕಾಗಿ :** "ಅಪೋಸ್ತಲ ಕೃತ್ಯ ಹತ್ತನೇ ಅಧ್ಯಾಯದಲ್ಲಿ ಪರಲೋಕದ ದೂತರು ಒಂದು ಸೇವೆ ಮಾಡಿದ ಘಟನೆ ಇದ್ದು, ಅದರ ಫಲವಾಗಿ ಕೊರ್ನೇಲಿಯನ್ನು ಮತ್ತು ಆತನ ಪರಿವಾರದವರು ಕ್ರೈಸ್ತಮತ ಅಂಗೀಕಾರ ಮಾಡಿದರು. ಈ ಅಧ್ಯಾಯಗಳು (8–10) ಅಭ್ಯಾಸ ಮಾಡಲ್ಪಡಲಿ ಹಾಗೂ ಜನರು ಇವುಗಳಿಗೆ ಹೆಚ್ಚಿನ ಗಮನ ಕೊಡಲಿ. ಇವುಗಳ ಆತ್ಮರಕ್ಷಣೆಯ ಕಾರ್ಯಗಳಲ್ಲಿ ತೊಡಗಿದವರು ಪರಲೋಕಕ್ಕೆ ಬಹಳ ಸಮೀಪದಲ್ಲಿ ಯೋಚಿಸಲಿಕ್ಕಿಲ್ಲ. ಈ ಅಧ್ಯಾಯಗಳ ಮೂಲಕ ದೇವರು ಎಲ್ಲರನ್ನೂ ಒಂದೇ ರೀತಿಯಲ್ಲಿ ಗೌರವಿಸುತ್ತಾನೆ ಮತ್ತು ಪತಿಯೊಬ್ಬರು ಇತರರನ್ನು ಅವರೆಲ್ಲರೂ ದೇವರ ಸೇವೆಗಾಗಿ ಕರೆಯಲ್ಪಟ್ಟವರೂ, ಆತನ ಕೆಲಸ ಮಾಡಿ ಮುಗಿಸಲು ಆಯ್ದ ಸಾಧನಗಳು ಎಂದು ಪರಿಗಣಿಸಬೇಕು" ಎಲೆನ್ ಜಿ ವೈಟ್, ದಿ ಎಸ್‌ಡಿಎ ಬೈಬಲ್ ಕಾಮೆಂಟರಿ, ವಾಲ್ಯೂಮ್ 6, ಪುಟ 1059.

"ಸಭೆಯು ಪ್ರಾರ್ಥಿಸುವಾಗ, ದೇವರ ಕೆಲಸ ಮುಂದೆ ಸಾಗುತ್ತದೆ ಮತ್ತು ಆತನ ವೈರಿಗಳು ಶೂನ್ಯಕ್ಕಿಳಿಯುತ್ತಾರೆ; ಹೀಗಾಗುವಾಗ ಸಭೆ ಹಿಂಸೆಗೊಳಗಾಗುವುದನ್ನು ಮತ್ತು ಪ್ರಾಣತ್ಯಾಗವಾಗುವ ತಡೆಯಲಾಗದು; ಸುವಾರ್ತೆಯ ವಿಜಯದ ಬಗ್ಗೆ ಲೂಕನು ಹೇಳುವದು ವಾಸ್ತವ ಸತ್ಯ; ಆತನು ಹೇಳುವುದೇನೆಂದರೆ, ದೇವರ ವಾಕ್ಯವನ್ನು ಬಂಧಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅದನ್ನು ಸಾರುವ ಸುವಾರ್ತಿಕರು ಬಂಧಿಸಲ್ಪಡುವರು ಮತ್ತು ಬಾಧಿಸಲ್ಪಡುವರು". ಐ ಹೋವರ್ಡ್ ಮಾರ್ಶಲ್, *ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್ (ಗ್ರ್ಯಾಂಡ್ ರ್‍ಯಾಪಿಡ್ಸ್, ಯರ್ಡ್‌ಮ್ಯಾನ್ಸ್ 1980).* ಪುಟ 206, 207.

**ಚರ್ಚಿಸಬೇಕಾದ ಪ್ರಶ್ನೆಗಳು**

1. **ಕೊರ್ನೇಲಿಯನನ್ನು, "ಭಕ್ತನೂ ತನ್ನ ಮನೆಯವರೆಲ್ಲರ ಸಮೇತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನ ಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು" *(ಅ.ಕೃತ್ಯ 10;2)* ಎಂದು ಬಣ್ಣಿಸಲಾಗಿದೆ. ಇದರಿಂದ ದೇವರಾತ್ಮನು ಆತನಲ್ಲಿ ಪೇತ್ರನು ಅವನನ್ನು ಭೇಟಿಯಾಗುವ ಪೂರ್ವದಲ್ಲಿಯೇ ಕೆಲಸ ಮಾಡುತ್ತಿದ್ದಾನೆಂದು ತಿಳಿದು ಬರುತ್ತದೆ. ಆತನ ಈ ಭಕ್ತಿಯು ಬದುಕಿನಿಂದಾಗಿಯೇ ದೇವರು ಅವನಿಗೆ ಸುವಾರ್ತೆ ಮುಟ್ಟಿಸಿದನು ಎಂದು ಹೇಳಬಹುದೇ? ಅವನ ಕಥೆಯಲ್ಲಿ ನಾವು ಕಲಿಯಬಹುದಾದ ಪಾಠವೇನು?**

2. **ಹಿಂದೆ ಹೋಗಿ, ಸೋಮವಾರದ ಕೊನೆಯ ಪ್ರಶ್ನೆಯನ್ನು ನೀವೇ ಕೇಳಿಕೊಳ್ಳಿರಿ; ಕ್ರೈಸ್ತರಲ್ಲಿರಬಾರದ ಯಾವ ಜಾತಿ-ಕುಲಭೇದದ ಸಮಸ್ಯೆಗಳು; ಸಂಸ್ಕಾರಯುತ, ಸಾಮಾಜಿಕ, ರಾಜಕೀಯವಾದವುಗಳು ಇಂದು ಸಭೆಯಲ್ಲಿ ಗೊಂದಲವನ್ನುಂಟು ಮಾಡಿವೆ? ಅಂದರೆ, ಕ್ರೈಸ್ತರು ತಾವು ಅನ್ಯ ಸಂಸ್ಕಾರಗಳ ಹಿನ್ನೆಲೆಯಿಂದ ಬಂದು ಈಗಲೂ ಅವುಗಳ ಹಿಡಿತದಲ್ಲಿದ್ದಾರೆ ಮತ್ತು ಅವುಗಳನ್ನು ಗೆಲ್ಲುವದು ಹೇಗೆ?**

3. **ಪೌಲನು ಪ್ರಾರಂಭದಲ್ಲಿ ಸಭೆಗುಂಟು ಮಾಡಿದ ಹಿಂಸೆ ಹಾನಿ ಮಾಡಿದರೂ ಕೆಲವು ಒಳ್ಳೆಯ ಫಲಿತಾಂಶಗಳೂ ತೋರಿಬಂದವು; ವಲಸೆ ಹೋದ ನಿರಾಶ್ರಿತರು ಅಂತಿಯೋಕ್ಯಕ್ಕೆ ಬಂದು ಅಲ್ಲಿಯ ಯೆಹೂದ್ಯ ಮತ್ತು ಗ್ರೀಕ್ ಅನ್ಯರಿಗೆ ಸುವಾರ್ತೆ ಸಾರಿದರು. ವೈಯಕ್ತಿಕ ನೋವಿನ ಅನುಭವ ಕ್ರಮೇಣ ಆಶೀರ್ವಾದವಾಗಿ ಪರಿಣಮಿಸಿದ್ದನ್ನು ಸ್ಮರಿಸಿಕೊಂಡು ತರಗತಿಯವರೊಂದಿಗೆ ಹಂಚಿಕೊಳ್ಳಿರಿ.**

4. **ಯಾಕೋಬನು ಯೇಸುಸ್ವಾಮಿಯ ಆಪ್ತಶಿಶ್ಯರಲ್ಲಿ ಒಬ್ಬನು *(ಮಾರ್ಕ 5:37, 9:2, 14:33)*; ಆದರೂ ಅವನು ಹನ್ನೆರಡು ಜನ ಶಿಷ್ಯರಲ್ಲಿ ಪ್ರಥಮ ಹುತಾತ್ಮನಾದನು. ಇಂಥ ಬೇರೆ ಉದಾಹರಣೆಗಳು ಸತ್ಯವೇದದಲ್ಲಿವೆಯೇ? ಇವುಗಳ ಮೂಲಕ ನಾವು ವೈಯಕ್ತಿಕವಾಗಿ, ಬಾಧೆಯ ಬಗ್ಗೆ ಏನು ಕಲಿಯಬಹುದು?**